

ಹಿಮಶಿಖರಗಳ ಚೆಲುವು,
ನದಿಗಳ ಸೊಬಗಿನಿಂದ
ಕಂಗೊಳಿಸುವ 'ಸ್ಪಿಟಿ ವ್ಯಾಲಿ'

# ದೇವಭೂಮಿಯಲ್ಲೊಂದು ಮಳೆ ಕಾಣದ ನಂದನ

# ಸ್ಪಿಟಿ ವ್ಯಾಲಿ

**ಸುಂದರ ಕಲಾಕೃತಿಯಂತೆ ಕಾಣುವ ಹಿಮಾಲಯದ ಸ್ಪಿಟಿ ವ್ಯಾಲಿ, ಹಾದಿಯುದ್ದಕ್ಕೂ ಅಚ್ಚರಿಗಳನ್ನು ಎದುರುಗಾಣಿಸುತ್ತದೆ.**

■ ಶಾಂತಾ ಜಯಾನಂದ್



ಕಲ್ಪಾದಿಂದ ಕಾಣುವ ಕಿನ್ನೂರ್ ಕೈಲಾಶ್ ಪರ್ವತ ಶ್ರೇಣಿಗಳು

'ನಿಮ್ಮ ಮೆಚ್ಚಿನ ತಾಣ ಯಾವುದು?' ಯಾರಾದರೂ ನನ್ನನ್ನು ಈ ಪ್ರಶ್ನೆ ಕೇಳಿದಾಗೆಲ್ಲ ನನ್ನ ಉತ್ತರ 'ಹಿಮಾಲಯ' ಎಂದೇ ಆಗಿರುತ್ತದೆ. ಹಾಗೆ ಉತ್ತರ ನೀಡುತ್ತಲೇ, ಹಿಮಾಲಯದ ಚಾರಣದತ್ತ ಮನಸ್ಸು ಓಡುತ್ತದೆ. ಕಣ್ಮುಚ್ಚಿ ಧ್ಯಾನಿಸಿದಷ್ಟೂ ಹಿಮವೇ ಕಾಣುತ್ತದೆ.

ಹಿಮಾಲಯ, ಜೀವ ಚೈತನ್ಯವೀವ ಸ್ಥಳ. ಅದಕ್ಕೆಂದೇ ನಮ್ಮ ಪುರಾಣ, ಹಿಮಾಲಯವನ್ನು ಶಿವನ ವಾಸಸ್ಥಾನ ಎನ್ನುವುದು. 'ದೇವ ಭೂಮಿ' ಎಂದು ಪ್ರೀತಿಯಿಂದ ಕರೆಯುವುದು.

ಜೂನ್ ತಿಂಗಳಿನಿಂದ ಆಗಸ್ಟ್, ಚಾರಣಕ್ಕೆ ಹೇಳಿ ಮಾಡಿಸಿದ ಸಮಯ. ಮಳೆಯು ಆಗಾಗ ನಾನು ಇಲ್ಲೇ ಇದ್ದೇನೆ ಎಂದು ಮಾತನಾಡಿಸಿಕೊಂಡು ಹೋಗುತ್ತದೆ. ಈ ತಿಂಗಳುಗಳಲ್ಲಿ ಹಿಮ ಪರ್ವತದ ತುದಿಯಲ್ಲಷ್ಟೇ ಹಿಮವಿದ್ದು, ಟೋಪಿ ಹಾಕಿಸಿಕೊಂಡಂತೆ ಗೋಚರಿಸುತ್ತದೆ. ಹೆಚ್ಚು ಹಸಿರು, ಸ್ವಲ್ಪ ಹಿಮ, ಆಗಾಗ ಮಳೆ, ಎಲ್ಲೆಲ್ಲೂ ಹಿಮ ಝರಿ... ಆಹಾ ದೈವಸೃಷ್ಟಿಯೇ ಎಂದು ಮನಸ್ಸು ಪ್ರಫುಲ್ಲಗೊಳ್ಳುತ್ತದೆ. ಆಗೀಗ ಬಂದು ಜೀವ ಬೆಚ್ಚಗೆ ಮಾಡುವ ಸೂರ್ಯರಶ್ಮಿ ಪರ್ವತದ ಹಿಮದ ಟೋಪಿಗೆ ಚಿನ್ನದ ರೇಕುಗಳನ್ನು ಹರಿಸಿ ಹಸಿರಿಗೆ ಮತ್ತಷ್ಟು ಹೊಳಪು ನೀಡುತ್ತದೆ. ಪುಟಿಯುವ ಝರಿಯ ತುಂತರ ಮೇಲೆ ಹಾಯ್ದು ಕಾಮನಬಿಲ್ಲು ಮೂಡಿಸಿ ತುಂಬಿ ಹರಿವ ನದಿಗಳಿಗೆ ಹಾಯ್ ಹೇಳಿ ಕಣ್ಮರೆಯಾಗುತ್ತಾನೆ ಸೂರ್ಯ.

ಹಿಮಾಲಯದ ಬಗ್ಗೆ ಹೇಳ ಹೊರಟರೆ ಮಾತು ಮರೆತು ಧ್ಯಾನಸ್ಥಳಾದಂತೆ ಅನ್ನಿಸುತ್ತದೆ. ಹೀಗೆ ಹಿಮದ ಮೇಲೆ ಮೋಹ ಉಕ್ಕಿ, ಗೆಳತಿಯರೆಲ್ಲಾ ಒಂದಾಗಿ ಹಿಮಾಲಯದ 'ಸ್ಪಿಟಿ ವ್ಯಾಲಿ'ಗೆ ಹೋಗಬೇಕೆಂದು ನಿರ್ಧರಿಸಿದೆವು. ಈಗಾಗಲೇ ಹಿಮಾಲಯಕ್ಕೆ ಟ್ರೆಕ್ಕಿಂಗ್ ಮಾಡಿದ್ದ ನನಗೆ ಮತ್ತೆ ಹಿಮಾಲಯಕ್ಕೆ ಹೋಗುವುದು ಎಂದ ಕೂಡಲೇ ಮನಸ್ಸು ಕಡಲಾಯಿತು. ನಮ್ಮ ಪ್ರವಾಸ ಆರಂಭವಾಯಿತು.

ಬೆಂಗಳೂರಿನಿಂದ ಚಂಡೀಗಢ್ ತನಕ ವಿಮಾನ ಪಯಣ. ಅಲ್ಲಿಂದ ನಮಗಾಗಿ ಕಾದಿದ್ದ ವಾಹನದಲ್ಲಿ ಪಯಣ ಮುಂದುವರೆಸಿದೆವು. ಅಲ್ಲಿಂದ ಮೊದಲು